**ದಿನಾಂಕ 08.09.15 ರಂದ್ದು ಗೋವಿಂದಪುರದಲ್ಲಿ ನಡೆದ**

# ಸಾಮಾಜಿಕ ಭದ್ರತೆಯ ಪಿಂಚಣಿ ಯೋಜನೆಗಳ ಬಗ್ಗೆ ಕುಂದು ಕೊರತೆಗಳ ಅಹವಾಲು ಮೇಳ ಕಾರ್ಯಕ್ರಮದ ವರದಿ

**ಕಾರ್ಯಕ್ರಮದ ಮುಖ್ಯ ಅತಿಥಿಗಳು**

**ಶ್ರೀಮತಿ ಆರ್.ಮಂಜುಳಮ್ಮ**
ಉಪ ತಹಸೀಲ್ದಾರ್, ಡಿ.ಜೆ.ಹಳ್ಳಿ ಹೋಬಳಿ, ಬೆಂಗಳೂರು ಉತ್ತರ

**ಶ್ರೀಮತಿ ವಿಶಾಲಾಕ್ಷಿ ಜಿ.ಕೆ**
ಉಪ ತಹಸೀಲ್ದಾರ್, ಹೆಬ್ಬಾಳ

**ಶ್ರೀ ಡಿ.ವೆಂಕಟೇಶ್**
ಪೋಸ್ಟ್ ಮಾಸ್ಟರ್, ಅರೆಬಿಕ್ ಕಾಲೇಜ್ ಅಂಚೆ ಕಛೇರಿ, ನಾಗವಾರ,

**ಶ್ರೀ ಆನಂದ್ ಕುಮಾರ್**
ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ಪ್ರೆಜರ್ ಟೌನ್

**ಶ್ರೀಮತಿ ಕಾತ್ಯಾಯನಿ ಚಾಮರಾಜ್**
ಕಾರ್ಯನಿರ್ವಹಕ ಟ್ರಸ್ಟಿ, ಸಿವಿಕ್ ಬೆಂಗಳೂರು ಸಂಸ್ಥೆ,

**ಶ್ರೀ ಯೂಸೆನ್ ಅಹ್ಮದ್ ಶರೀಫ್**
ಪ್ರಧಾನ ಕಾರ್ಯದರ್ಶಿಗಳು, ನಾಗವಾರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ

**ಸ್ವಾಗತ:** ಕಾರ್ಯಕ್ರಮಕ್ಕೆ ಆಗಮಿಸಿದ್ದವರಿಗೆ ಸಿವಿಕ್ ಬೆಂಗಳೂರು ಸಂಸ್ಥೆಯ ಮುಖ್ಯ ಯೋಜನಾ ಸಂಯೋಜಕರಾದ ಶ್ರೀ ಮದುಸೂದನ್ ರವರು ಸ್ವಾಗತ ಕೋರಿದರು.

**ಸಾಮಾಜಿಕ ಪಿಂಚಣಿ ಯೋಜನೆಗಳ ಬಗ್ಗೆ ಮಾಹಿತಿ:** ಸಿವಿಕ್ ಬೆಂಗಳೂರು ಸಂಸ್ಥೆಯ ಯೋಜನಾ ಸಂಯೋಜಕರಾ ಶ್ರೀ ರಾಮಾಂಜಿ ರವರು ಸಾಮಾಜಿಕ ಪಿಂಚಣಿ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಬಹುತೇಕ ವೃದ್ಧಾಪ್ಯ ವೇತನ ಪಡೆಯುತ್ತಿದ್ದ ಹಿರಿಯ ನಾಗರೀಕರು ಹಾಜರಾಗಿ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು. ನಾಗವಾರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಮತ್ತು ಸಿವಿಕ್ ಸಂಸ್ಥೆಯು ಫಲಾನುಭವಿಗಳ ಸಮಸ್ಯೆಗಳನ್ನು ಪಟ್ಟಿ ಮಾಡಿ ಸಂಬಂಧಿಸಿದ ಇಲಾಖೆಗಳಿಗೆ ನೀಡಲಾಗಿತ್ತು.

ವೃದ್ಧಾಪ್ಯ ವೇತನದ ಫಲಾನುಭವಿಯಾದ ಶ್ರೀ ಚಂದ್ರಪ್ಪ ರವರು ಮಾತನಾಡಿ 3 ತಿಂಗಳಿಂದ್ದ ವೇತನ ಬಾರದಿರುವ ಕಾರಣ ತುಂಬಾ ತೋಂದರೆಯಾಗಿದೆಯೆಂದು ಅಧಿಕಾರಿಗಳ ಮುಂದೆ ತಮ್ಮ ಸಮಸ್ಯೆಯನ್ನು ಹೇಳಿಕೊಂಡರು. ಫಲಾನುಭವಿಗಳ ಸಮಸ್ಯೆಗಳನ್ನು ಪಟ್ಟಿ ಮಾಡಿ ಇಲಾಖೆ ನೀಡಲಾಗಿದ್ದ ಸಮಸ್ಯೆಗಳ ಪಟ್ಟಿಗೆ ವೇದಿಯಲ್ಲಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ವಿವರಣೆ ನೀಡಿದರು.

**ಡಿ.ವೆಂಕಟೇಶ್, ಪೋಸ್ಟ್ ಮಾಸ್ಟರ್, ಅರೆಬಿಕ್ ಕಾಲೇಜ್ ಅಂಚೆ ಕಛೇರಿ:** ಅಂಚೆ ಇಲಾಖೆಗೆ ಸಂಬಂಧಿಸಿದ ದೂರುಗಳಿಗೆ ಪೋಸ್ಟ್ ಮಾಸ್ಟರ್ ಡಿ.ವೆಂಕಟೇಶ್ ಮಾತನಾಡಿ ಫಲಾನುಭವಿಗಳ ಹೆಸರಿನಲ್ಲಿ ಅಂಚೆ ಕಛೇರಿಯಲ್ಲಿ ಖಾತೆಯನ್ನು ತೆರೆದು ನೇರವಾಗಿ ಅವರ ಖಾತೆಗೆ ಹಣ ಜಮಾ ಮಾಡುವ ಪ್ರಕ್ರಿಯೆ ನಡೆಯುತ್ತಿರುವುದರಿಂದ ಕೆಲವು ಫಲಾನುಭವಿಗಳಿಗೆ ವೇತನ ತಲುಪುವಲ್ಲಿ ವಿಳಂಬವಾಗಿದ್ದು ನಾಳೆಯೆ ಎಲ್ಲರಿಗೂ ವಿತರಿಸಲಾಗುವುದೆಂದ್ದರು. ಎಲ್ಲಾ ರೀತಿಯ ಫಲಾನುಭವಿಗಳು ಸೂಕ್ತ ದಾಖಲೆಗಳಾದ 2 ಭಾವಚಿತ್ರ, ಆಧಾರ್ ಸಂಖ್ಯೆ, ಮತ್ತು 50 ರೂ ನೀಡಿ ಖಾತೆ ತೆರೆಯಬೇಕು ಇದರಿಂದ ಫಲಾನುಭವಿವು ದೇಶದ ಯಾವುದೇ ಪ್ರದೇಶದಿಂದ ತನ್ನ ಖಾತೆಯಲ್ಲಿ ಹಣವನ್ನು ಡ್ರಾ ಮಾಡಬಹುದೆಂದರು.

ಪೋಸ್ಟ್ ಮ್ಯಾನ್ ರವರು ಮಾತನಾಡಿ ಕೆಲವು ಹಿರಿಯ ನಾಗರೀಕರಿಗೆ 90 ವರ್ಷ ವಯಸ್ಸಾದರು ಕೇವಲ 200 ರಿಂದ್ದ 500 ರೂ ಮಾತ್ರ ಬರುತ್ತಿದ್ದು ಇಂತಹವರಿಗೆ 750 ರೂ ದೊರೆಯುವಂತ್ತಾಗಬೇಕೆಂದರು. ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಮಂಜೂಳ ರವರು ಮಾತನಾಡಿ ಇಂತಹವರಿಗೆ ನಾವಾಗಿಯೇ ವೇತನವನ್ನು ಹೆಚ್ಚಿಸಲು ಅವಕಾಶವಿಲ್ಲ ಪ್ರಸ್ತುತ ಇಂತಹವರು ಹೊಸದಾಗಿ ಅರ್ಜಿ ಸಲ್ಲಿಸುವುದು ಅಗತ್ಯವಿದ್ದು ಈ ವಿಷಯವನ್ನು ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದೆಂದ್ದರು.

ಕೆಲವು ಮಹಿಳೆಯರ ಪತಿಗಳು ಹೆಂಡತಿಯರನ್ನು ತೊರೆದು ಹೋಗಿ 15–20 ವರ್ಷಗಳಾಗಿದ್ದರೂ ಸಹ ಹಿಂದಿರುಗಿ ಬಾರದಿರುವ ಕಾರಣ ಈ ಮಹಿಳೆಯರಿಗೆ ವಿಧವಾ ವೇತನ ನೀಡಬೇಕೆಂದು ಬಂದ ಕೋರಿಕೆಗೆ ಶ್ರೀಮತಿ ಆರ್.ಮಂಜುಳಮ್ಮ ಮಾತನಾಡಿ ಇಂತಹ ಮಹಿಲೆಯರು ಸಂಬಂಧಿಸಿದ ಪೋಲೀಸ್ ಕಛೇರಿಯಲ್ಲಿ ದೂರು ನೀಡಿ ಆ ಕಛೇರಿಯಿಂದ ಗಂಡನ ಮರಣದ ದೃಡೀಕರಣ ಪತ್ರವನ್ನು ಸಲ್ಲಿಸಿದರೆ ವಿಧವಾ ವೇತನ ನೀಡಲಾಗುವುದೆಂದ್ದರು.

**ಶ್ರೀ ಯೂಸೆನ್ ಅಹ್ಮದ್ ಶರೀಫ್ :** ಹಳ್ಳಿಯಿಂದ್ದ ನಗರಕ್ಕೆ ವಲಸೆ ಬರುವ ವಿವಿಧ ಫಲಾನುಭವಿಗಳು ನಗರ ಪ್ರದೇಶದಲ್ಲಿ ವೇತನವನ್ನು ಹೇಗೆ ಪಡೆಯಬೇಕು.

**ಶ್ರೀಮತಿ ಆರ್.ಮಂಜುಳಮ್ಮ:** ಹಳ್ಳಿಯಿಂದ್ದ ನಗರಕ್ಕೆ ವಲಸೆ ಬರುವ ವಿವಿಧ ಫಲಾನುಭವಿಗಳು ಅಲ್ಲಿನ ತಾಲ್ಲೂಕು ಕಛೇರಿಯಲ್ಲಿ ಯಾವ ಪ್ರದೇಶಕ್ಕೆ ಸ್ಥಳಾಂತರವಾಗುತ್ತಾರೋ ಆ ಸ್ಥಳಕ್ಕೆ ತಮ್ಮ ಹೆಸರನ್ನು ಸ್ಥಳಾಂತರಿಸುವಂತೆ ಬರೆಸಿಕೊಂಡು ಪ್ರಸ್ತುತ ವಾಸವಿರುವ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಕಛೇರಿಗೆ ನೀಡಿದರೆ ಫಲಾನುಭವಿಗೆ ಇಲ್ಲಿಂದಲೇ ವೇತನ ನೀಡಾಲಾಗುವುದು.

ಹೊಸದಾಗಿ ವಿವಿಧ ಪಿಂಚಣಿಗೆ ಅರ್ಜಿ ಸಲ್ಲಿಸುವವರನ್ನು ಸ್ಥಳಿಯವಾಗಿ ನಿರ್ಧಿಷ್ಟ ದಿನಾಂಕದಂದು ಪಿಂಚಣಿ ಅದಾಲತ್ ಮಾಡುವ ಮೂಲಕ ಸ್ಥಳದಲ್ಲೆ ಅರ್ಜಿಯನ್ನು ಸ್ವೀಕರಿಸಲಾಗುವುದು.

ಉಪ ತಹಸೀಲ್ದಾರ್, ಡಿ.ಜಿ.ಹಳ್ಳಿ ಹೋಬಳಿ, ಬೆಂಗಳೂರು ಉತ್ತರ ಇವರು ಮಾತನಾಡಿ ನಮ್ಮಲ್ಲಿ ಬರುವ ಅರ್ಜಿಗಳನ್ನು ಶೀಘ್ರವಾಗಿ ವಿವೇವಾರಿ ಮಾಡಲು ಸಿಬ್ಬಂದಿಗಳ ಕೊರತೆಯಿರುವುದರಿಂದ್ದ ತಡವಾಗುತ್ತಿದ್ದು, ಆದರೆ ಸಮಾರು 1500 ಸಾವಿರ ಫಲಾನುಭವಿಗಳಿಗೆ ಪಿಂಚಣಿ ಮಂಜೂರಾಗಿದ್ದು ಫಲಾನುಭವಿಗಳು ಮಂಜೂರಾತಿ ಪತ್ರವನ್ನು ಪಡೆದುಕೊಳ್ಳಬೇಕೆಂದ್ದರು.

**ಶ್ರೀಮತಿ ಕಾತ್ಯಾಯನಿ ಚಾಮರಾಜ್,**ಕಾರ್ಯನಿರ್ವಹಕ ಟ್ರಸ್ಟಿ, ಸಿವಿಕ್ ಬೆಂಗಳೂರು ಸಂಸ್ಥೆ ಇವರು ಮಾತನಾಡಿ ರಾಜಸ್ಥಾನದಲ್ಲಿ ಪಿಂಚಣಿಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಒಂದೇ ವೇದಿಕೆಯಡಿ ಅರ್ಜಿದಾರರ ಅರ್ಜಿಯನ್ನು ಪರಿಶೀಲಿಸಿ ಸ್ಥಳದಲ್ಲೆ ಅರ್ಹ ಫಲಾನುಭವಿಗೆ ಮಂಜೂರು ಪ್ರಮಾಣ ಪತ್ರ ನೀಡಲಾಗುತ್ತಿದೆ. ಆದರೆ ರಾಜ್ಯದಲ್ಲಿ ಪಿಂಚಣಿಗಾಗಿ ಅರ್ಜಿ ಸಲ್ಲಿಸಿ 3, 4 ತಿಂಗಳಾದರು ತನ್ನ ಅರ್ಜಿ ಯಾವ ಸ್ಥಿತಿಯಲ್ಲಿದೆ ಎಂದು ತಿಳಿದುಕೊಳ್ಳಲು ಸರಿಯಾದ ವ್ಯವಸ್ಥೆಯಿಲ್ಲ. ಇನ್ನು ಮುಂದೆಯಾದರು ಅರ್ಹ ಫಲಾನುಭವಿಗಳಿಗೆ ಶಿಘ್ರವಾಗಿ ಪಿಂಚಣಿ ಸಿಗುವಂತ್ತಾಗಬೇಕೆಂದು ಅಧಿಕಾರಿಗಳಲ್ಲಿ ಮನವಿ ಮಾಡಿದರು.

ಫಲಾನುಭವಿಯ ಬ್ಯಾಂಕ್ ಖಾತೆಗೆ ವೇತನ ಜಮಾ ಆಗಿರುವ ಬಗ್ಗೆ ಫಲಾನುಭವಿಯ ದೂರವಾಣಿ ಸಂಖ್ಯೆಗೆ ಸಂದೇಶ ಕಳುಹಿಸುವ ಮೂಲಕ ತಿಳಿಸಬೇಕೆಂದು ಅಧಿಕಾರಿಗಳಿಗೆ ಸಲಹೆ ನೀಡಿದರು. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಆದಾಲತ್‌ಗಳು ನಡೆಸುತ್ತಿಲ್ಲವೆಂದು ತಿಳಿಸುತ್ತಿದ್ದೀರಿ ಆದರೆ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ನೂರಾ ಇಪ್ಪತ್ತು ಕೋಟಿ ಜನರಿರುವ ಕಾರಣ ಇಲ್ಲಿಯೂ ಅದಾಲತ್‌ಗಳನು ನಡೆಸಬೇಕೆಂದರು
ಬಡತನವನ್ನು ಅಳೆಯಲು ಆದಾಯ ಮಿತಿಯು ವಾರ್ಷಿಕ 17000/- ಇದ್ದು ಬೆಂಗಳೂರಿಗಲ್ಲಿ ಈ ಮೊತ್ತದಲ್ಲಿ ಯಾರೊಬ್ಬರು ಜೀವಿಸಲು ಸಾಧ್ಯವಿಲ್ಲ ಆದ್ದರಿಂದ ವಾರ್ಷಿಕ ಆದಾಯ ಮಿತಿಯನ್ನು ಹೆಚ್ಚಿಸಬೇಕೆಂದರು

# ಕಾರ್ಯಕ್ರಮದ ಛಾಯಾ ಚಿತ್ರಗಳು




ಕಾರ್ಯಕ್ರಮದಲ್ಲಿ ವೃಧಾಪ್ಯ ವೇತನದ ಫಲಾನುಭವಿಯು ತಮ್ಮ ಸಮಸ್ಯೆಯನ್ನು ಅಧಿಕಾರಿಗಳ ಮುಂದೆ ಪ್ರಸ್ತಾಪಿಸಿದರು




ಕಾರ್ಯಕ್ರಮದಲ್ಲಿ ಶ್ರೀ  ಆನಂದ್ ಕುಮಾರ್,ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ಪ್ರೆಜರ್ ಟೌನ್. ನಾಗವಾರ ಪೋಸ್ಟ್ ಮ್ಯಾನ್, ಶ್ರೀ ಡಿ.ವೆಂಕಟೇಶ್, ಪೋಸ್ಟ್ ಮಾಸ್ಟರ್, ಅರೆಬಿಕ್ ಕಾಲೇಜ್ ಅಂಚೆ ಕಛೇರಿ, ನಾಗವಾರ, ಶ್ರೀಮತಿ ವಿಶಾಲಾಕ್ಷಿ ಜಿ.ಕೆ ಉಪ ತಹಸೀಲ್ದಾರ್, ಹೆಬ್ಬಾಳ. ಶ್ರೀಮತಿ ಆರ್.ಮಂಜುಳಮ್ಮ, ಉಪ ತಹಸೀಲ್ದಾರ್,ಬೆಂಗಳೂರು ಉತ್ತರ. ಶ್ರೀಮತಿ ಕಾತ್ಯಾಯನಿ ಚಾಮರಾಜ್, ಕಾರ್ಯನಿರ್ವಹಕ ಟ್ರಸ್ಟಿ, ಸಿವಿಕ್ ಬೆಂಗಳೂರು ಸಂಸ್ಥೆ, ಶ್ರೀ ಯೂಸೆನ್ ಅಹ್ಮದ್ ಶರೀಫ್,ಪ್ರಧಾನ ಕಾರ್ಯದರ್ಶಿಗಳು, ನಾಗವಾರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಜರಿದ್ದರು



ಕಾರ್ಯಕ್ರಮದಲ್ಲಿ  ನಾಗವಾರ ಅರೆಬಿಕ್ ಕಾಲೇಜ್ ಅಂಚೆ ಕಛೇರಿಯ ಪೋಸ್ಟ್ ಮಾಸ್ಟರ್ ಶ್ರೀ ಡಿ.ವೆಂಕಟೇಶ್ ರವರು ಮತ್ತು ಬೆಂಗಳೂರು ಉತ್ತರ ಉಪ ತಹಸೀಲ್ದಾರ್ ಶ್ರೀಮತಿ ಆರ್.ಮಂಜುಳಮ್ಮ ವರರು ಇಲಾಖೆಗಳ ನಡುವೆ ಇರುವ ಗೊಂದಲಗಳ ಬಗ್ಗೆ ಚರ್ಚಿಸಿದರು. ಶ್ರೀಮತಿ ವಿಶಾಲಾಕ್ಷಿ ಜಿ.ಕೆ ಉಪ ತಹಸೀಲ್ದಾರ್, ಹೆಬ್ಬಾಳ. ಶ್ರೀಮತಿ ಕಾತ್ಯಾಯನಿ ಚಾಮರಾಜ್, ಕಾರ್ಯನಿರ್ವಹಕ ಟ್ರಸ್ಟಿ, ಸಿವಿಕ್ ಸಂಸ್ಥೆ.



ನಾಗವಾರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಯೂಸೆನ್ ಅಹ್ಮದ್ ಶರೀಫ್‌ರವರು ಫಲಾನುಭವಿಗಳ ವಿವಿಧ ಸಮಸ್ಯೆಗಳನ್ನು ಅಧಿಕಾರಿಗಳ ಮುಂದೆ ಪ್ರಸ್ತಾಪಿಸಿದರು.